ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

22

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 30/1/2021

# ಪರಿಷತ್ತಿನ ಗದ್ದಲಕ್ಕೆ ಕಾರ್ಯದರ್ಶಿ ಹೊಣೆ

## ಸದನ ಸಮಿತಿ ಮಧ್ಯಂತರ ವರದಿ ಮಂಡನೆ

## ಅಶ್ವತ್ಥ್, ಮಾಧುಸ್ವಾಮಿಯಿಂದ ಪ್ರಚೋದನೆ

## 11 ಶಾಸಕರ ವಿರುದ್ಧ ಕ್ರಮಕ್ಕೆ ಶಿಫಾರಸು

• ಕನ್ನಡಪ್ರಭ ವಾರ್ತೆ ವಿಧಾನ ಪರಿಷತ್ ಮೇಲ್ಮನೆಗೆ ಕಳಂಕ ತಂದ ಡಿ.15ರ ಅಹಿತಕರ ಘಟನೆಗೆ ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮೀ ಅವರೇ ಹೊಣೆ. ಅಂತಿಮ ವರದಿ ಸಲ್ಲಿಕೆಯಾಗುವವರೆಗೂ ಅವರು ಹುದ್ದೆ ನಿರ್ವಹಿಸದಂತೆ ನಿರ್ಬಂಧಿಸಬೇಕು. ಗದ್ದಲಕ್ಕೆ ಪ್ರಚೋದಿಸಿದ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ, ಸಚಿವರಾದ ಮಾಧುಸ್ವಾಮಿ, ಕೋಟ ಶ್ರೀನಿವಾಸ ಪೂಜಾರಿ ಹಾಗೂ ಮೂರೂ ಪಕ್ಷಗಳ ಒಟ್ಟು 11 ಮಂದಿ ಶಾಸಕರು ನಿರ್ದಿಷ್ಟ ಅವಧಿಗೆ ಕಲಾಪದಲ್ಲಿ ಪಾಲ್ಗೊಳ್ಳುವುದರಿಂದ ನಿರ್ಬಂಧಿಸಬೇಕು.

ಇದು ಡಿ. 15ರ ಪರಿಷತ್ತಿನ ಗದ್ದಲ ಘಟನೆ ಬಗ್ಗೆ ಮರಿತಿಬ್ಬೇಗೌಡ ನೇತೃತ್ವದ ಸದನ ಸಮಿತಿ ಶುಕ್ರವಾರ ಸದನಕ್ಕೆ ಸಲ್ಲಿಸಿದ ಮಧ್ಯಂತರ ವರದಿಯ ಮುಖ್ಯಾಂಶ.

ಕುತೂಹಲಕಾರಿ ಸಂಗತಿಯೆಂದರೆ, ಶುಕ್ರವಾರವಷ್ಟೇ ಪರಿಷತ್ತಿನ ಉಪ ಸಭಾಪತಿಯಾಗಿ ಆಯ್ಕೆಯಾದ ಬಿಜೆಪಿಯ ಪ್ರಾಣೇಶ್ ಸೇರಿದಂತೆ ಮೂರೂ ಪಕ್ಷಗಳ ಶಾಸಕರನ್ನು ವಿವಿಧ ಅವಧಿಗೆ ಕಲಾಪಕ್ಕೆ ಹಾಜರಾಗದಂತೆ ನಿರ್ಬಂಧಿಸಲು ಶಿಫಾರಸು ಮಾಡಲಾಗಿದೆ.

» 15

ಸಮಿತಿ ಅಂತಿಮ ವರದಿ ಸಲ್ಲಿಸುವವರೆಗೂ ಹುದ್ದೆಯ ಹೊಣೆ ನಿರ್ವಹಿಸದಂತೆ ಕೆ.ಆರ್.ಮಹಾಲಕ್ಷ್ಮೀ ಅವರಿಗೆ ನಿರ್ಬಂಧಿಸಲು ಶಿಫಾರಸು

# ವಿಧಾನ ಪರಿಷತ್ತಿನ ಗದ್ದಲಕ್ಕೆ ಕಾರ್ಯದರ್ಶಿ ಹೊಣೆ

ಮೊದಲ ಪುಟದಿಂದ

ಬಹುಮುಖ್ಯವಾಗಿ ಇಡೀ ಘಟನೆಗೆ ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮೀ ಅವರನ್ನು ಹೊಣೆ ಮಾಡಲಾಗಿದೆ. ಸಮಿತಿ ಅಂತಿಮ ವರದಿ ಸಲ್ಲಿಸುವವರೆಗೆ ಅವರನ್ನು ಹುದ್ದೆಯ ಹೊಣೆ ನಿರ್ವಹಿಸದಂತೆ ನಿರ್ಬಂಧಿಸಬೇಕು ಹಾಗೂ ಕರ್ತವ್ಯ ನಿರ್ಲಕ್ಷ್ಯ ಕುರಿತು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಇಲಾಖಾ ವಿಚಾರಣೆ ನಡೆಸಬೇಕು ಎಂದು ಶಿಫಾರಸು ಮಾಡಿದೆ.

ಉಪಸಭಾಪತಿ ಎಸ್.ಎಲ್. ಧರ್ಮೇಗೌಡ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರ ಮೇಲಿನ ವಿಚಾರಣೆ ಕೈಬಿಡಲಾಗಿದೆ. ಸಭಾಪತಿ ಪೀಠ ಅಲಂಕರಿಸಲು ಅವರಿಗೆ ಪ್ರಚೋದನೆ ನೀಡಿದ ಸಚಿವ ಜೆ.ಸಿ. ಮಾಧುಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ ಅವರು ಘಟನೆಗೆ ಮೂಲ ಪ್ರೇರಕರು ಎಂದು ಸಮಿತಿ ಗುರುತಿಸಿದೆ. ಮತ್ತೊಬ್ಬ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಸಹ ಘಟನೆಗೆ ಪ್ರೇರಣೆ ನೀಡಿದ್ದರಿಂದ ಮೂವರು ಸಚಿವರಿಗೆ ಸರ್ಕಾರದಲ್ಲಿ ಮುಖ್ಯ ಹೊಣೆಗಾರಿಕೆ ನೀಡುವುದು ಸೂಕ್ತವಲ್ಲ ಎಂದು ಸಲಹೆ ನೀಡಿದೆ. ಜತೆಗೆ, ಮುಂದಿನ ಎರಡು ಅಧಿವೇಶನದಲ್ಲಿ . ಪಾಲ್ಗೊಳ್ಳದಂತೆ ನಿರ್ಬಂಧಿಸಲು ಶಿಫಾರಸು ಮಾಡಿದೆ.

ಸಭಾಪತಿ ಪ್ರವೇಶಿಸುವ ದ್ವಾರ ಮುಚ್ಚಿದ ಬಿಜೆಪಿಯ ಎಂ.ಕೆ. ಪ್ರಾಣೇಶ್ ಹಾಗೂ ಡಾ. ವೈ.ಎ. ನಾರಾಯಣಸ್ವಾಮಿ ಮತ್ತು ಅರುಣ ಶಹಾಪುರ್ ಅವರನ್ನು ಮುಂದಿನ ಎರಡು ಅಧಿವೇಶನದಿಂದ ನಿರ್ಬಂಧಿಸಬೇಕು. ಸಭಾಪತಿ ಪೀಠದಲ್ಲಿ ಆಸೀನರಾದ ಚಂದ್ರಶೇಖರ್ ಬಿ. ಪಾಟೀಲ್ ಅವರನ್ನು ಹಾಗೂ ಉಪಸಭಾಪತಿಗಳನ್ನು ಪೀಠದಿಂದ ಎಳೆದು ಹಾಕಿದ ಕಾಂಗ್ರೆಸ್‌ನ ನಜೀರ್ ಅಹಮದ್, ಪ್ರತಿಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ಶ್ರೀನಿವಾಸ ವಿ. ಮಾನೆ, ಪ್ರಕಾಶ್ ಕೆ. ರಾಠೋಡ್ ಅವರನ್ನು ಮುಂದಿನ ಒಂದು ಅಧಿವೇಶನಕ್ಕೆ ನಿರ್ಬಂಧಿಸಬೇಕು.

ಉಪಸಭಾಪತಿ ಅವರನ್ನು ನಿಯಮಬಾಹಿರವಾಗಿ ಸಭಾಪತಿ ಪೀಠದಲ್ಲಿ ಕೂರಿಸಿದ ಜೆಡಿಎಸ್ ಸದಸ್ಯರಾದ ಬಸವರಾಜ ಹೊರಟ್ಟಿ, ಕೆ.ಟಿ. ಶ್ರೀಕಂಠೇಗೌಡ, ಗೋವಿಂದರಾಜ್ ಅವರನ್ನು ಎರಡು ಅಧಿವೇಶನಕ್ಕೆ ನಿರ್ಬಂಧಿಸಲು ವರದಿಯಲ್ಲಿ ಶಿಫಾರಸು . ಮಾಡಲಾಗಿದೆ. ಬಿಜೆಪಿಯ ಆಯನೂರು ಮಂಜುನಾಥ್ ಹಾಗೂ ಡಾ. ವೈ.ಎ. ನಾರಾಯಣಸ್ವಾಮಿ ಅವರನ್ನು ಮುಂದಿನ ಎರಡು ಅವಧಿಯ ಅಧಿವೇಶನದ ಕಾರ್ಯಕಲಾಪಗಳಿಗೆ ನಿರ್ಬಂಧಿಸಬೇಕೆಂದು ಸಮಿತಿಯ ವರದಿಯಲ್ಲಿ . ಶಿಫಾರಸು ಮಾಡಲಾಗಿದೆ.

## ಸಿಸಿಟೀವಿ ದೃಶ್ಯ ಆಧರಿಸಿ ವರದಿ

ಡಿ. 15ರಂದು ಸದನದಲ್ಲಿ ನಡೆದ ಅಹಿತಕರ ಘಟನೆ ಸಂಬಂಧ ಮಧ್ಯಂತರ ವರದಿ ನೀಡಿರುವ ಸದನ ಸಮಿತಿ, ಪ್ರಮುಖವಾಗಿ ವಿಧಾನ ಪರಿಷತ್ತಿನ ವೆಬ್ ಕಾಸ್ಟಿಂಗ್, ಲೋಕೋಪಯೋಗಿ ಇಲಾಖೆಯ ಸಿಸಿಟಿವಿ ಮತ್ತು ಖಾಸಗಿ ವಾಹಿನಿಗಳು ಸೆರೆ ಹಿಡಿದಿರುವ ದೃಶ್ಯಾವಳಿಗಳನ್ನು ಆಧರಿಸಿ ಶಿಫಾರಸು ಮಾಡಿದೆ. ದೃಶ್ಯಾವಳಿ ಹಾಗೂ ಘಟನೆ ಸಂಬಂಧ ಕಾರಣ ಕೇಳಿ ನೀಡಿದ ಪತ್ರಕ್ಕೆ ಕಾರ್ಯದರ್ಶಿ ನೀಡಿದ ವಿವರಣೆ ಮತ್ತು ಸಮಿತಿ ಮುಂದೆ ನೀಡಿರುವ ಹೇಳಿಕೆ ಆಧರಿಸಿ, ಪರಿಷತ್ತಿನ ಕಾರ್ಯದರ್ಶಿ ಎಂ.ಕೆ. ಮಹಾಲಕ್ಷ್ಮೀ ಅವರು ನಡಾವಳಿ ನಿಯಮಗಳ ಪ್ರಕಾರ ಸದನದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಕರ್ತವ್ಯಗಳಲ್ಲಿ ವಿಫಲರಾಗಿರುವುದರಿಂದ ಈ ಅಹಿತಕರ ಘಟನೆ ನಡೆದಿದೆಯೆಂದು ಸಮಿತಿ ಅಭಿಪ್ರಾಯ ಪಟ್ಟಿದೆ. ಉಳಿದಂತೆ ಪರಿಷತ್ತಿನ ದಂಡ ನಾಯಕ ವಿ.ಸಿ. ಗೋಪಾಲರೆಡ್ಡಿ ಮತ್ತು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಅವರ ಹೇಳಿಕೆ ಆಧರಿಸಿ ಮಧ್ಯಂತರ ವರದಿ ನೀಡಿದೆ.



ಪರಿಷತ್ತಿನ ಗದ್ದಲದ ದೃಶ್ಯ